**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**

**ಟಿ. ನರಸೀಪುರ.**

ದಿನಾಂಕ 08 ನೇ ಜನವರಿ 2026

**ಸಿ. ಸಿ ನಂ. 1317/2025**

ಪಿರ್ಯಾದಿದಾರರು : ಶಂಕರಯ್ಯ ಬಿನ್ ಲೇಟ್ ಚಿಕ್ಕಮೂಗಯ್ಯ, **72** ವರ್ಷ,
ವಾಸಃ ಆರ್.ಹೊಸಕೆರೆ, ಕೆ.ಇ.ಬಿ ರಸ್ತೆ,
ಬನ್ನೂರು ಟೌನ್, ಟಿ.ನರಸೀಪುರ ತಾಲ್ಲೂಕು.

ವಿರುದ್ಧ

ಆರೋಪಿ : ಬಿ.ಸಿ.ಗೋಪಾಲ ಬಿನ್ ಬಿ.ಕೆ.ಚಿಕ್ಕಸ್ವಾಮಿ, 60 ವರ್ಷ,
ವಾಸಃ ವಾರ್ಡ್ ನಂ.13, ಬನ್ನೂರು ಟೌನ್,
ಟಿ.ನರಸೀಪುರ ತಾಲ್ಲೂಕು.

**ದೋಷಾರೋಪಣೆ**

**ಶ್ರೀ ಸಚಿನ್ ಹೆಚ್.ಆರ್, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಟಿ.ನರಸೀಪುರ, ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ದೋಷಾರೋಪಣೆಯನ್ನು ಮಾಡುತ್ತೇನೆ.**

ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ

ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ಕುಟುಂಬದ ಕಾನೂನು ಬದ್ಧ ಅವಶ್ಯಕತೆಗಳಿಗಾಗಿ ದಿನಾಂಕ 10.03.2025 ರಂದು ಪಿರ್ಯಾದಿಯಿಂದ **ರೂ.2,00,000/-** ಗಳ ಹಣವನ್ನು ಕೈ ಸಾಲವಾಗಿ ಪಡೆದು, ಸದರಿ ಹಣದ ಮರುಪಾವತಿಗಾಗಿ ನೀವು ಬನ್ನೂರು ಬ್ರ್ಯಾಂಚ್ ನ ಕರ್ನಾಟಕ ಬ್ಯಾಂಕಿನ ನಿಮ್ಮ ಖಾತೆಗೆ ಸೇರಿದ ಚೆಕ್ ಸಂಖ್ಯೆ **747829 ದಿನಾಂಕ 12.05.2025** ನ್ನು ರೂ.2,00,000/- ಗಳ ಹಣಕ್ಕೆ ನೀಡಿರುತ್ತೀರಿ. ಸದರಿ ಚೆಕ್ ನ್ನು ಪಿರ್ಯಾದುದಾರರು ತಾವು ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್, ಬನ್ನೂರು ಬ್ರ್ಯಾಂಚ್, ಟಿ.ನರಸೀಪುರ ಖಾತೆಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ "Fund Insufficient" ಎಂಬ ಹಿಂಬರದೊಂದಿಗೆ ದಿನಾಂಕ

13.05.2025 ರಂದು ಸದರಿ ಚೆಕ್ ಅಮಾನ್ಯವಾಗಿರುತ್ತದೆ. ನಂತರ ಪಿರ್ಯಾದುದಾರರು ತನ್ನ ವಕೀಲರ ಮೂಲಕ ದಿನಾಂಕ 16.05.2025 ರಂದು ನೊಂದಿಯಿತ ಅಂಚೆ ಮೂಲಕ ನಿಮಗೆ ನೋಟೀಸನ್ನು ನೀಡಿದ್ದು, ಸದರಿ ನೋಟೀಸ್ ನಿಮಗೆ ದಿನಾಂಕ 23.05.2025 ರಂದು ಜಾರಿಯಾಗಿದ್ದು, ಸದರಿ ನೋಟೀಸಿಗೆ ಜವಾಬನ್ನು ನೀಡಿರುವುದಿಲ್ಲ, ಆದ್ದರಿಂದ ಆರೋಪಿಯಾದ ನೀವು ನನ್ನ ಸಂಜ್ಞೆಯೊಳಗೆ ಕಲಂ 138 ವರ್ಗಾವಣೆಯ ಲಿಖಿತಗಳ ಕಾಯ್ದೆಯಡಿಯಲ್ಲಿ ಅಪರಾದ ಎಸಗಿರುತ್ತೀರಿ.

ಈ ಮೇಲಿನ ಆರೋಪದ ವಿಚಾರಣೆಯು ನಿಮ್ಮ ವಿರುದ್ಧ ಈ ನ್ಯಾಯಾಲಯದಲ್ಲಿ ನಡೆಯತಕ್ಕದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ **08.01.2026.**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ.**
**ಟಿ. ನರಸೀಪುರ.**

**ಆರೋಪಿತರ ಹೇಳಿಕೆ**

ಪ್ರಶ್ನೆ- 1 ಈಗ ಓದಿ ಹೇಳಿದ ಆರೋಪಣೆಯನ್ನು ಅರ್ಥ ಮಾಡಿಕೊಂಡಿರಾ ?

ಉತ್ತರಃ

ಪ್ರಶ್ನೆ-2 ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆನ್ನುವಿರಾ?
ಉತ್ತರಃ

**(ಮೇಲ್ಕಂಡ ಆರೋಪಣೆಯನ್ನು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದು ಕೊಂಡಿದ್ದು ಅವು ಸರಿಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)**

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ.**
**ಟಿ. ನರಸೀಪುರ.**

**ಆರೋಪಿ ಸಹಿ**